ದಿನಾಂಕ ಃ 10-08-2017 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಃ ಶ್ರೀ ಎಮ್ಎಚ್ಕೆ ವಕೀಲರಿಂದ ಃ

ಗೋಪೆಪ್ಪ ಸೋಮಪ್ಪ ಲಮಾಣಿ ಎನ್ನುವವರು ನನ್ನ ತಂದೆ ಅಂದರೆ ಸರಿ. ದೇಮಪ್ಪ ಪೀರಪ್ಪ ಲಮಾಣಿ, ದೇವಪ್ಪ ಪೀರಪ್ಪ ಲಮಾಣಿ, ಈರಪ್ಪ ಪೀರಪ್ಪ ಲಮಾಣಿ, ಸುಬ್ಬಪ್ಪ ಚಿಕ್ಕಪ್ಪ ಲಮಾಣಿ, ಮಲ್ಲಪ್ಪ ಚಿಕ್ಕಪ್ಪ ಲಮಾಣಿ ಇವರು ನಮ್ಮ ಅಜ್ಜನಾದ ಸೋಮಪ್ಪ ಇವರ ತಮ್ಮನ ಮಕ್ಕಳು ಅಂದರೆ ಸುಳ್ಳು. ಈ ಎಲ್ಲ ಹೆಸರಿನ ವ್ಯಕ್ತಿಗಳು ನಮ್ಮ ಸಂಬಂಧಿಕರೇ ಇರುತ್ತಾರೆ. ಅವರು ನಮ್ಮ ದೂರದ ಸಂಬಂಧಿಕರು ಇರುತ್ತಾರೆ. ಸೇವಾನಗರದ ಸರ್ವೇ ನಂ 130/11 ನೇದ್ದರ 1 ಎ 23 ಗುಂಟೆ ಜಮೀನಿನ ಖಾತೆಯು ಈ ಮೇಲೆ ಹೇಳಿದ ವ್ಯಕ್ತಿಗಳ ಮತ್ತು ನನ್ನ ತಂದೆಯ ಜಂಟಿ ಹೆಸರಿನಲ್ಲಿ ಇರುತ್ತದೆ ಅಂದರೆ ಸರಿ. ಅದೇ ರೀತಿ ಸರ್ವೇ ನಂ 137/2 ರ 7 ಎಕರೆ 36 ಗುಂಟೆ ಜಮೀನಿನ ಖಾತೆಯೂ ಸಹ ಈ ಮೇಲೆ ಹೇಳಿದ ಹೆಸರಿನ ವ್ಯಕ್ತಿಗಳ ಮತ್ತು ನಮ್ಮ ತಂದೆಯ ಜಂಟಿ ಹೆಸರಿನಲ್ಲಿ ಇರುತ್ತದೆ ಅಂದರೆ ಸರಿ. ದೇವಪ್ಪ ಗೇಮಪ್ಪ ಲಮಾಣಿ ಎನ್ನುವವರು ನಮ್ಮ ಊರಿನಲ್ಲಿ ಯಾವುದೇ ವ್ಯಕ್ತಿ ಇರುವುದಿಲ್ಲ ಅಂದರೆ ಸಾಕ್ಷಿ ಅದಾರೋ ಇಲ್ಲವೋ ತಮಗೆ ಗೊತ್ತಿಲ್ಲವೆಂದು ಉತ್ತರಿಸಿರುತ್ತಾರೆ. ದೇವಪ್ಪ ಪೀರಪ್ಪ ಲಮಾಣಿ ಎನ್ನುವವರು ನಮ್ಮ ಊರಿನಲ್ಲಿ ಇರುತ್ತಾರೆ ಅಂದರೆ ಸರಿ. ಸದರಿ ದೇವಪ್ಪ ಪೀರಪ್ಪ ಲಮಾಣಿ ಇವರು 2 ಮತ್ತು 3 ನೇ ಪ್ರತಿವಾದಿಯರ ತಂದೆ ಅಂದರೆ ಸರಿಯಲ್ಲ. ಗೇಮಪ್ಪ ರಾಮಪ್ಪ ಲಮಾಣಿ ಇವರಿಗೆ 3 ಜನ ಹೆಣ್ಣು ಮಕ್ಕಳು ಅಂದರೆ ಇರಬಹುದು. ನನಗೆ ಗೊತ್ತಿಲ್ಲ. ನಾನು ನೋಡಿಲ್ಲ. ಗೇಮಪ್ಪ ರಾಮಪ್ಪ ಲಮಾಣಿ ಇವರಿಗೆ ಗಂಡು ಮಕ್ಕಳು ಇರುವುದಿಲ್ಲ ಅಂದರೆ ಸುಳ್ಳು. ಸಾಕ್ಷಿ ದೇಮಪ್ಪ ಎನ್ನುವವರು ಇರುತ್ತಾರೆ ಎಂದು ಹೇಳಿರುತ್ತಾರೆ. ಗೇಮಪ್ಪ ರಾಮಪ್ಪ ಲಮಾಣಿ ಇವರ ಕುಟುಂಬದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ಅಂದರೆ ಸರಿ. ಗೇಮಪ್ಪ ರಾಮಪ್ಪ ಲಮಾಣಿ ಇವರಿಗೆ ಒಬ್ಬನೇ ಮಗ ಇರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ವಾದಿಯರು ದಾವಾದ ಆಸ್ತಿಯ ಸಾಗುವಳಿ ಮಾಡುತ್ತಿದ್ದಾರೆ ಅಂದರೆ ಸುಳ್ಳು. ದಾವಾದ ಆಸ್ತಿಯು

ಪ್ರತಿವಾದಿಯರ ಕಬ್ಜೆಯಲ್ಲಿರುತ್ತದೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 2 ಮತ್ತು 3 ನೇ ಪ್ರತಿವಾದಿಯರ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 2 ಮತ್ತು 3 ನೇ ಪ್ರತಿವಾದಿಯರ ತಂದೆ ಈಗ ಆರೋಗ್ಯವಾಗಿ ಇರುತ್ತಾರೆ ಅಂದರೆ ಸರಿ. 2 ಮತ್ತು 3 ನೇ ಪ್ರತಿವಾದಿಯರ ತಂದೆಗೆ ತಮ್ಮ ಕೆಲಸ ತಾವು ಮಾಡಿಕೊಂಡು ಓಡಾಡಿಕೊಂಡು ಇರುತ್ತಾರೆ ಅಂದರೆ ಸುಳ್ಳು. ಸಾಕ್ಷಿ ಅವರಿಗೆ ಪಾರ್ಶ್ವವಾಯು ಇರುತ್ತದೆ ಎಂದು ಹೇಳಿರುತ್ತಾರೆ. 2 ಮತ್ತು 3 ನೇ ಪ್ರತಿವಾದಿಯರ ತಂದೆಗೆ ಪಾರ್ಶ್ವವಾಯು ಆಗಿರುತ್ತದೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಸಹಿ

ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆಎಂಎಫ್‌ಸಿ. ನ್ಯಾಯಾಲಯ, ಬ್ಯಾಡಗಿ.